# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ ಅಬ್ದುಲ್ ಜಬ್ಬಾರ್ ಇವರು "**ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಕೆರೆಬಿಳಚಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸ್ತ್ರೀರೋಗ ತಜ್ಞರನ್ನು ವರ್ಗಾವಣೆ ಮಾಡುವುದರ ಜೊತೆಗೆ ಹುದ್ದೆಗಳನ್ನೂ ಸಹ ಕಡಿತಗೊಳಿಸಿರುವುದು ಖಂಡನೀಯ.**

**ಗ್ರಾಮಾಂತರ ಪ್ರದೇಶದಲ್ಲಿರುವ ಆರೋಗ್ಯ ಸಮುದಾಯ ಕೇಂದ್ರದಲ್ಲಿರುವ ತಜ್ಞವೈದ್ಯರನ್ನು ವರ್ಗಾವಣೆಗೊಳಿಸುವುದರ ಜೊತೆಗೆ ಅವರನ್ನು ತಾಲ್ಲೂಕು ಆಸ್ಪತ್ರೆಗಳಿಗೆ ನೇಮಕಗೊಳಿಸಿರುವುದು ನಿಜಕ್ಕೂ ಖಂಡನೀಯ. ಗ್ರಾಮೀಣ ಭಾಗಗಳಲ್ಲಿ ಸ್ತ್ರೀರೋಗ ತಜ್ಞರು ಕೇವಲ ಹೆರಿಗೆಗಳನ್ನು ಮಾಡಿಸಲು ಸೀಮಿತವಾಗದೇ ಗರ್ಭಿಣಿಯರ ಚಿಕಿತ್ಸೆ ಸೇರಿದಂತೆ ಬಾಣಂತಿಯರು, ವಯೋಸಹಜ ಕಾಯಿಲೆ, ಮಕ್ಕಳಾಗದಿರುವ ಚಿಕಿತ್ಸೆ ಹೀಗೆ ಹತ್ತು ಹಲವು ಮಹಿಳೆಯರ ರೋಗಗಳಿಗೆ ಸ್ತ್ರೀರೋಗ ತಜ್ಞರು ಚಿಕಿತ್ಸೆ ನೀಡುತ್ತಾರೆ. ಗ್ರಾಮೀಣ ಭಾಗಗಳಲ್ಲಿ ತಿಂಗಳಿಗೆ 6 ರಿಂದ 7 ಹೆರಿಗೆಗಳಾಗುತ್ತಿರುವುದರಿಂದ ಸಮುದಾಯದ ಆರೋಗ್ಯ ಕೇಂದ್ರದಲ್ಲಿ ಸ್ತ್ರೀರೋಗ ತಜ್ಞರ ಅವಶ್ಯಕತೆ ಹೆಚ್ಚಾಗಿರುತ್ತದೆ.**

**ಆದುದರಿಂದ, ಸ್ತ್ರೀರೋಗ ತಜ್ಞರನ್ನು ವರ್ಗಾವಣೆಗೊಳಿಸಿ, ಹುದ್ದೆಗಳನ್ನು ಕಡಿತಗೊಳಿಸಿದರೆ ಗ್ರಾಮೀಣ ಭಾಗದಲ್ಲಿ ವಾಸಿಸುವ ಜನರಿಗೆ ಸಕಾಲಕ್ಕೆ ಚಿಕಿತ್ಸೆ ಸಿಗದೇ ತುಂಬಾ ತೊಂದರೆಗಳು ಉಂಟಾಗುವುದರ ಜೊತೆಗೆ ಮರಣಗಳೂ ಸಂಭವಿಸಬಹುದಾಗಿರುತ್ತದೆ.**

**ಸದರಿ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಸ್ತ್ರೀರೋಗ ತಜ್ಞರ ಅವಶ್ಯಕವಿರುವುದರಿಂದ ವರ್ಗಾವಣೆ ಮತ್ತು ಹುದ್ದೆಗಳ ಕಡಿತದ ಬಗ್ಗೆ ಪುನರ್ ಪರಿಶೀಲಿಸಬೇಕೆಂದು**" ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಹೇಳಿಕೆ;

*******

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಡಿಮೆ ಸಾಧನೆಯನ್ನು ಮಾಡಿದ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿನ ಕೆಲವು ಹುದ್ದೆಗಳನ್ನು ರದ್ದುಗೊಳಿಸಲು ಹಾಗೂ ಸದರಿ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತಜ್ಞ ವೈದ್ಯರನ್ನು ಇತರೆ ಆರೋಗ್ಯ ಕೇಂದ್ರಗಳಲ್ಲಿ ಖಾಲಿಯಿರುವ ಕ್ರಿಟಿಕಲ್ ಹುದ್ದೆಗಳಿಗೆ ಸ್ಥಳ ನಿಯುಕ್ತಿಗೊಳಿಸಲು ನಿರ್ಧರಿಸಲಾಗಿದೆ. ಅದರಂತೆ, ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಕೆರೆಬಿಳಚಿ ಸಮುದಾಯ ಆರೋಗ್ಯ ಕೇಂದ್ರವು ಕಡಿಮೆ ಸಾಧನೆಯ ಆರೋಗ್ಯ ಕೇಂದ್ರವಾಗಿರುವುದರಿಂದ, ಸದರಿ ಆರೋಗ್ಯ ಕೇಂದ್ರಕ್ಕೆ ಮಂಜೂರಾಗಿರುವ 01 ಸ್ತ್ರೀರೋಗ ತಜ್ಞರ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತಿದ್ದ ಡಾ|| ಶಶಿಕಲಾ ಹೆಚ್.ಆರ್. ಸ್ತ್ರೀರೋಗ ತಜ್ಞರು ಇವರನ್ನು ದಿನಾಂಕ: 05.08.2025 ರಂದು ಸಮಾಲೋಚನೆಯ ಮೂಲಕ ಸಾರ್ವಜನಿಕ ಆಸ್ಪತ್ರೆ, ಜಗಳೂರು ದಾವಣಗೆರೆ ಜಿಲ್ಲೆ ಇಲ್ಲಿಗೆ ಸ್ಥಳ ನಿಯುಕ್ತಿಗೊಳಿಸಲಾಗಿದೆ. ಪ್ರಸ್ತುತ ಹುದ್ದೆಯು ಖಾಲಿ ಇದ್ದು, ಪ್ರಸ್ತುತ ಯಾವುದೇ ಸಾರ್ವಜನಿಕರಿಗೆ ತೊಂದರೆಯಾಗದಂತೆ ಆರೋಗ್ಯ ಸೇವೆಯನ್ನು ನೀಡಲು ಕ್ರಮವಹಿಸಲಾಗುತ್ತಿದೆ.

**ಆಕುಕ 92 ಹೆಚ್ಎಸ್ಡಿ 2025**

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು**